ದಿನಾಂಕ 02/02/2019 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಆಯುಕ್ತರು ರವರ ಆದೇಶದಂತೆ ವಾರ್ಡ್ ಸಮಿತಿ ಸಭೆಯನ್ನು ವಾರ್ಡ್-10ರ ಕಾರ್ಯದರ್ಶಿ ಮತ್ತು ಶ್ರೀಮತಿ.ಜಯಲಕ್ಷ್ಮಮ್ಮ ಪಿಳ್ಳಪ್ಪ ರವರ ಅಧ್ಯಕ್ಷತೆಯಲ್ಲಿ ಬೆಳಿಗ್ಗೆ 11.00 ಪ್ರಾರಂಭಿಸಲಾಯಿತು.

ಹಾಜರಿದ್ದ ಪಾಲಿಕೆ ಸಮಿತಿ ಸದಸ್ಯರು

- ಶ್ರೀಮತಿ.ಜಯಲಕ್ಷ್ಮಮ್ಮ ಪಿಳ್ಳಪ್ಪ, ಅಧ್ಯಕ್ಷರು
- ಶ್ರೀ.ಕಾಮಯ್ಯ.ಬಿ ಸದಸ್ಯರು
- ಶ್ರೀಮತಿ.ಮಹಾಲಕ್ಷ್ಮಿ, ಸದಸ್ಯರು
- ಶ್ರೀ.ಮುನಿರೆಡ್ಡಿ, ಸದಸ್ಯರು
- ಶ್ರೀ.ಆರ್.ಮಂಜುನಾಥ್, ಸದಸ್ಯರು
- ಶ್ರೀ.ಸಂಪಂಗಿ ರಾಯ್ಡು, ಸದಸ್ಯರು

ಹಾಜರಿದ್ದ ಅಧಿಕಾರಿ /ನೌಕರರು

- ಶ್ರೀ.ರಾಜಶೇಖರ್, ಉಪ ಆಯುಕ್ತರು(ಯ.ವ)
- ಶ್ರೀಮತಿ.ಆರ್.ವಿಜಯಲಕ್ಷ್ಮಿ ಸ.ಕ.ಅ
- ಶ್ರೀ.ನಾರಾಯಣ ಸ್ವಾಮಿ, ಮೌಲ್ಯಮಾಪಕರು
- ಶ್ರೀಮತಿ.ಶ್ವೇತ, ಸಹಾಯಕ ಅಭಿಯಂತರರು, ವಾ-10
- ಶ್ರೀ.ಪ್ರಭಾಕರ್, ಅರೋಗ್ಯ ಪರಿವೀಕ್ಷಕರು
- ಶ್ರೀ.ಅಣ್ಣಪ್ಪ, ಕಂ.ವ
- ಶ್ರೀ.ಸತ್ಯನಾರಾಯಣ,ಕಂ.ವ
- ಶ್ರೀ.ಶಿವಕುಮಾರ್, ದ್ವಿ.ದ.ಸ
- ಶ್ರೀಮತಿ.ಲಕ್ಷ್ಮೀದೇವಿ (ಪ್ರ.ದ.ಸ)
- ಶ್ರೀ.ಬಿ.ನಾರಾಯಣ ಸ್ವಾಮಿ, ಬಿ.ಡಬ್ಲ್ಯೂ.ಎಸ್.ಎಸ್.ಬಿ
- ಶ್ರೀ.ರಾಮಾಂಜಪ್ಪ, ಬೆಸ್ಕಾಂ,
- ಶ್ರೀ.ನಂಜೇಗೌಡ ಸ್ಟ್ರೀಟ್ ಲೈಟ್ಸ್,
- ಶ್ರೀ.ಪರಮೇಶ್ವರ್.ಎಸ್.ಎಂ, ಯಲಹಂಕ ಸಂಚಾರ,
- ಶ್ರೀ.ಜಯರಾಮ್, ಹೆಡ್ ಕಾನ್ಸ್‌ಬಲ್

ಸ.ಕಂ.ಅ (ವಿ.ಷು) :- ಹಿಂದಿನ ಮಾಸಿಕ ಸಭೆಯ ನಡವಳಿಕೆಯನ್ನು ಓದಿ ಎಂದು ಹೇಳಿದರು. ಅದಕ್ಕೆ ಉತ್ತರವಾಗಿ ಶ್ರೀ.ಅಣ್ಣಪ್ಪ, ಕಂದಾಯ ವಸೂಲಿಗಾರರು ಪೂರ್ಣ ನಡವಳಿಕೆಯನ್ನು ಓದಿದರು.

ಶ್ರೀಮತಿ.ಜಯಲಕ್ಷ್ಮಮ್ಮ ಪಿಳ್ಳಪ್ಪ, ಅಧ್ಯಕ್ಷರು ಮತ್ತು ಸದಸ್ಯರು:- ಸ್ಟ್ರೀಟ್ ಲೈಟ್ ರಸ್ತೆಗಳಲ್ಲಿ ಸರಿಯಾದ ಸಮಯದಲ್ಲಿ ಆನ್ & ಆಫ್ ಆಗುತ್ತಿಲ್ಲಾ, ಸ್ವಿಚ್ಛಸ್ ಸರಿಯಾಗಿ ಕೆಲಸ ಮಾಡುತ್ತಿಲ್ಲಾ, ಸ್ವಿಚ್ಚಸ್ ಗಳನ್ನು ಬದಲಾಯಿಸಬೇಕು. ಕೃತಿಕಾ ಆಸ್ಪತ್ರೆ ಹತ್ತಿರ ಸ್ಟ್ರೀಟ್ ಲೈಟ್‌ಗಳೇ ಇಲ್ಲಾ ದಯವಿಟ್ಟು ಒದಗಿಸಿಕೊಡಿ. **(Replacing Sodium Orange Street lights with LED Lights)**

ಕ್ರಮ:- ಸಹಾಯಕ ಕಾರ್ಯಪಾಲಕ ಅಭಿಯಂತರರು (ವಿದ್ಯುತ್)

ಶ್ರೀಮತಿ.ಜಯಲಕ್ಷ್ಮಮ್ಮ ಪಿಳ್ಳಪ್ಪ, ಅಧ್ಯಕ್ಷರು:- ಎಲೆಕ್ಟ್ರಿಕಲ್ ಕೆಲಸ ಕಾರ್ಯಗಳಿಗೆ ರೂ.20 ಲಕ್ಷ ಮಂಜೂರು ಆಗಿರುತ್ತದೆ. ಸದರಿ ಕೆಲಸ ಕಾರ್ಯಗಳನ್ನು ಸರಿದೂಗಿಸಿಕೊಳ್ಳಬಹುದು.

ಶ್ರೀ.ಕಾಮಯ್ಯ, ಸದಸ್ಯರು:- ವಾರ್ಡ್-10ಕ್ಕೆ ವಾರಕ್ಕೆ ಎರಡು ಬಾರಿ ನೀರು ಸರಬರಾಜು ಮಾಡುತ್ತಾ ಇದ್ದರು. ಕಳೆದ ವಾರ ನೀರು ಬರದೇ ಹೋದ ಕಾರಣ ಸಮಸ್ಯೆ ಉಂಟಾಯಿತು. ಬೋರ್ ವೆಲ್ ಕೂಡ ದುರಸ್ಥಿಯಲ್ಲಿ ಇರುತ್ತದೆ. ಆದುದರಿಂದ ಇಂತಹ ಸಮಯದಲ್ಲಿ ಟ್ಯಾಂಕ್ ನೀರು ಸರಬರಾಜು ಮಾಡುವುದು ಉತ್ತಮ ಎಂದು ವಿನಂತಿಸಿಕೊಂಡರು. ಮತ್ತು ನೀರು ಕಡಿಮೆ ಬರುವುದರಿಂದ ವಾರದಲ್ಲಿ ಮೂರು ಬಾರಿ ಕಾವೇರಿ ನೀರು ಸರಬರಾಜು ಮಾಡಬೇಕೆಂದು ಎಲ್ಲಾ ಸದಸ್ಯರು ಒತ್ತಾಯಿಸಿರುತ್ತಾರೆ. ಮತ್ತು ಮ್ಯಾನುವಲ್ ನಿಂದ ಹುಳು ತೆಗೆದು ಅಲ್ಲಿಯೇ ರಸ್ತೆಯಲ್ಲಿ ಹಾಕಿರುತ್ತಾರೆ.

ಕ್ರಮ:- ಸಹಾಯಕ ಕಾರ್ಯಪಾಲಕ ಅಭಿಯಂತರರು (BWSSB)

**<u>ಶ್ರೀಮತಿ.ಜಯಲಕ್ಷ್ಮಮ್ಮ ಪಿಳ್ಳಪ್ಪ, ಅಧ್ಯಕ್ಷರು ಮತ್ತು ಸದಸ್ಯರು:-</u>** ಮನೆಗಳಿಗೆ ಸಾಮಾನ್ಯವಾಗಿ ರಾತ್ರಿ 8.00 ಗಂಟೆಗೆ ನೀರು ಸರಬರಾಜು ಮಾಡುತ್ತಿದ್ದರು. ಈಗಾ ರಾತ್ರಿ 10 ಗಂಟೆಯಾದರು ನೀರು ಬರುವುದಿಲ್ಲ, ಸುಮಾರು 4 ರಿಂದ 5 ವರ್ಷಗಳಿಂದ ರಾತ್ರಿ ವೇಳೆಯಲ್ಲಿ ನೀರು ಸರಬರಾಜು ಮಾಡಿತ್ತಿದ್ದಾರೆ, ಅದನ್ನು ಹಗಲಿನಲ್ಲಿ ಸರಬರಾಜು ಮಾಡುವುದು ಉತ್ತಮ ಎಂದು ವಿನಂತಿಸಿಕೊಂಡರು.

<u>ಕ್ರಮ:</u>-ಸಹಾಯಕ ಕಾರ್ಯಪಾಲಕ ಅಭಿಯಂತರರು (BWSSB)

**<u>ಶ್ರೀಮತಿ.ಜಯಲಕ್ಷ್ಮಮ್ಮ ಪಿಳ್ಳಪ್ಪ, ಅಧ್ಯಕ್ಷರು ಮತ್ತು ಸದಸ್ಯರು</u>** :- ನಂಜಪ್ಪ ಲೇಔಟ್ 3ನೇ ಕ್ರಾಸಿನಲ್ಲಿ ಮರಗಳ ರಂಬೆಗಳನ್ನು ಕಡೆದು ಹಾಕಬೇಕು ಎಂದರು.

<u>ಕ್ರಮ:</u>- ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ

**<u>ಎಲ್ಲಾ ಸದಸ್ಯರು</u>** :- ರಸ್ತೆಯ ನಾಮ ಫಲಕ (Name Board) ಬಿದ್ದು ಹೋಗಿದೆ, ಕೆಲವು ನಾಮ ಫಲಕಗಳು ನೇರವಾಗಿ ಇಲ್ಲದೆ ಬಾಗಿವೆ, ಸರಿಪಡಿಸ ಬೇಕು. ರಾಮಚಂದ್ರಪುರ ಮ್ಯೆನ್ ರೋಡ್ ಪುಟ್ ಬಾತ್ ಇಲ್ಲದೇ ಸಾರ್ವಜನಿಕರಿಗೆ ಓಡಾಡಲು ಅನಾನುಕೂಲವಾಗಿರುತ್ತದೆ.

<u>ಕ್ರಮ:-</u>ಸಹಾಯಕ ಕಾರ್ಯಪಾಲಕ ಅಭಿಯಂತರರು(ವಾ-10)

**<u>ಶ್ರೀಮತಿ.ಜಯಲಕ್ಷ್ಮಮ್ಮ ಪಿಳ್ಳಪ್ಪ, ಅಧ್ಯಕ್ಷರು:-</u>** ಫೂಟ್ ಪಾತ್ ಮೇಲೆ ಕಲ್ಲುಗಳು ಹಾಗೆಯೇ ಇದೆ, ತೆಗೆದು ಹಾಕಿರುವುದಿಲ್ಲ. ತೆಗೆದು ಹಾಕಲು ಕ್ರಮ ವಹಿಸಬೇಕು.

<u>ಕ್ರಮ:-</u>ಸಹಾಯಕ ಕಾರ್ಯಪಾಲಕ ಅಭಿಯಂತರರು (ವಾ-10)

**<u>ಶ್ರೀ.ಗಾಟಿ (ಸಾರ್ವಜನಿಕರು):-</u>** 8ನೇ ಅಡ್ಡರಸ್ತೆಯಿಂದ 4ನೇ ಅಡ್ಡರಸ್ತೆಯ ವರೆವಿಗೂ ಮೋರಿ ನೀರು ಲೀಕೇಜ್ ಆಗಿ ಅಕ್ಕ-ಪಕ್ಕ ಮನೆ ವಾಸವಾಗಿರುವವರಿಗೆ ಕೆಟ್ಟ ವಾಸನೆ ಬರುತ್ತಿದೆ.

**<u>ಶ್ರೀಮತಿ.ಜಯಲಕ್ಷ್ಮಮ್ಮ ಪಿಳ್ಳಪ್ಪ, ಅಧ್ಯಕ್ಷರು:-</u>** ಸದರಿ ಕೆಲಸ ಕಾರ್ಯಗಳು ಪ್ರಗತಿಯಲ್ಲಿದೆ.

**<u>ಶ್ರೀಮತಿ.ಜಯಲಕ್ಷ್ಮಮ್ಮ ಪಿಳ್ಳಪ್ಪ, ಅಧ್ಯಕ್ಷರು ಮತ್ತು ಸದಸ್ಯರು:-</u>** ದೊಡ್ಡಬೊಮ್ಮಸಂದ್ರ ಬಸ್ ಸ್ಟ್ಯಾಂಡ್ ಹತ್ತಿರವಿರುವ ಎಳನೀರು ಅಂಗಡಿ ತೆರೆವುಗೊಳಿಸ ಬೇಕು. ಫುಟ್ ಬಾತ್ ವೆಂಡರ್ಸ್ ಎಂಕ್ರೋಚ್‌ಮೆಂಟ್ ಮಾಡಿರುವವರುಗಳನ್ನು ತೆರವುಗೊಳಿಸ ಬೇಕು.

**<u>ಶ್ರೀಮತಿ.ಶ್ವೇತ (ಐಇ)</u>** :- ಕೋರ್ಟ್ ಕೇಸ್ ಪ್ರಕಾರ, ನಾವು ಪುಟ್ ಬಾತ್ ವೆಂಡರ್ಸ್ ವರುಗಳನ್ನು ತೆರವುಗೊಳಿಸುತ್ತಾ ಇದ್ದೇವೆ ಮತ್ತು ಫೆಬ್ರವರಿ 6 ರಂದು ತೆರವುಗತೊಳಿಸುವ ಕಾರ್ಯಕ್ರಮ ಹಮ್ಮಿಕೊಂಡಿದ್ದೇವೆ. ಈ ರೀತಿ ತಿಂಗಳಿಗೆ ಮೂರು ಬಾರಿ ತೆರವುಗೊಳಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತೇವೆ.

**<u>ಸಾರ್ವಜನಿಕರು(ಶ್ರೀ.ಪಿಳ್ಳಪ್ಪ):-</u>** ನಂಜಪ್ಪ ಸರ್ಕಲ್ ಬಳಿ ಇರುವ ಬಸ್ [illegible] ಸ್ಟ್ಯಾಂಡ್ ಅನ್ನು ಎಡಗಡೆಗೆ ವರ್ಗಾಯಿಸಲು ಬಿ.ಎಂ.ಟಿ.ಸಿ.ಗೆ ಪತ್ರ ತಯಾರಿಸಬೇಕು. ನಂಜಪ್ಪ ಸರ್ಕಲ್‌ನಲ್ಲಿ ಟ್ರಾಫಿಕ್ ಸಿಗ್ನಲ್ ಅಳವಡಿಸಬೇಕು. ದೊಡ್ಡಬೊಮ್ಮಸಂದ್ರ ವೃತ್ತದ ಎಡಗಡೆ ಬಸ್ ಶೆಲ್ಟರ್ ಅಳವಡಿಸಬೇಕು.

**ಎಲ್ಲಾ ಸದಸ್ಯರು:-** ಫಿಲೋಮಿನಾನ್ಸ್ ಸ್ಕೂಲ್, ನಂಜಪ್ಪ ಸರ್ಕಲ್ ಹತ್ತಿರವಿರುವ ಶನಿಮಾತ್ಮ ದೇವಸ್ಥಾನ ಬಳಿ ಮತ್ತು ಮಜಾತಿಂಡಿ ಹತ್ತಿರ **"ಹಮ್ಸ್" (Zebra Crossing)** ಮತ್ತು ಸಿಸಿ ಕ್ಯಾಮರ ಅಳವಡಿಸಲು ಕೋರಿದರು. ರಿಲೆಯನ್ಸ್ ಪ್ರೆಶ್ ಮುಂದೆ ವಾಹನ ನಿಲ್ಲಿಸಿರುವುದು ಸಾರ್ವಜನಿಕರಿಗೆ ತೊಂದರೆ ಉಂಟಾಗುತ್ತಿರುತ್ತದೆ.

**ಕ್ರಮ:-** ಪೋಲೀಸ್ ಸಂಚಾರ.

**ಶ್ರೀಮತಿ.ಜಯಲಕ್ಷ್ಮಮ್ಮ ಪಿಳ್ಳಪ್ಪ, ಅಧ್ಯಕ್ಷರು ಮತ್ತು ಸದಸ್ಯರು:-** ರಾಘವೇಂದ್ರ ದೇವಸ್ಥಾನ, ಬೈರಪ್ಪ ಗಾರ್ಡ್, ಬನಶಂಕರಿ ರಸ್ತೆ, ಕೊಡಗು ಸಮಾಜ ರಸ್ತೆ ಬಳಿ ಹಾಗೂ ರಿಲೆಯನ್ಸ್ ಎದುರು ಇರುವ ಸ್ಮಶಾನ ಹತ್ತಿನ ಜನರು ಮದ್ಯಪಾನ ಮಾಡಿ ಹಾಗೂ ಗಾಂಜಾ ಹೊಡೆದು ಬಾಟಲ್‌ಗಳನ್ನು ಅಲ್ಲಿಯೇ ಎಸೆದಿರುತ್ತಾರೆ. ಇದರ ಬಗ್ಗೆ ಜನರಿಗೆ ಎಚ್ಚರಿಕೆ ಕೊಡಬೇಕು ಹಾಗೂ ಪೋಲೀಸ್ ಇಲಾಖೆಯವರು ಈ ವಿಷಯದ ಬಗ್ಗೆ ಹಮನಹರಿಸಬೇಕು.

**ಕ್ರಮ:-** ಪೋಲೀಸ್ ಸಂಚಾರ.

**ಎಲ್ಲಾ ಸದಸ್ಯರು:-** ಹಿಂದಿನ ಸಭೆಯಲ್ಲಿ ಚರ್ಚೆ ಮಾಡಿದ ದೊಡ್ಡಬೊಮ್ಮಸಂದ್ರದ ಹಂಚಿನಲ್ಲಿರುವ ಬಿಬಿಎಂಪಿಸ್ವತ್ತಿನಲ್ಲಿ ಅಕ್ರಮವಾಗಿ ನಿರ್ಮಾಣವಾಗಿರುವ ಕಟ್ಟಡಗಳನ್ನು ತೆರವುಗೊಳಿಸಿ, (ಮಟನ್ ಅಂಗಡಿ, ಚಿಕನ್ ಅಂಗಡಿ, ಫಿಶ್ ಅಂಗಡಿ, ವಿನಾಯಕ ಸಂಘ) ಬಿಬಿಎಂಪಿಯ ವಶಕ್ಕೆ ಪಡೆಯಬೇಕೆಂದು ಸಭೆಯ ಎಲ್ಲಾ ಸದಸ್ಯರುಗಳು ಮತ್ತೊಮ್ಮೆ ಅಧ್ಯಕ್ಷರುಗಳಿಗೆ ಒತ್ತಾಯಿಸಿರುತ್ತಾರೆ.

**ಕ್ರಮ:-**ಸಹಾಯಕ ಕಾರ್ಯಪಾಲಕ ಅಭಿಯಂತರರು(ವಾ-10) /ARO

ವಂದನಾರ್ಪಣೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಸಹಾಯಕ ಕಂದಾಯ ಅಧಿಕಾರಿ(ವಿದ್ಯಾರಣ್ಯಪುರ)
ಹಾಗೂ ಕಾರ್ಯದರ್ಶಿಗಳು ವಾರ್ಡ್-10
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ಅಧ್ಯಕ್ಷರು,
ವಾರ್ಡ್ ಕಮಿಟಿ-10,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಪ್ರತಿಯನ್ನು:

- ಕೌನ್ಸಿಲ್ ಕಾರ್ಯದರ್ಶಿ, ಬಿಬಿಎಂಪಿ, ಕೇಂದ್ರ ಕಛೇರಿ ರವರ ಅವಗಾಹನೆಗಾಗಿ ಮಂಡಿಸಿದೆ.
- ಅಪರ ಆಯುಕ್ತರು(ಯಲಹಂಕ) ರವರ ಅವಗಾಹನೆಗಾಗಿ ಮಂಡಿಸಿದೆ.
- ಉಪ ಆಯುಕ್ತರು(ಯಲಹಂಕ) ರವರ ಅವಗಾಹನೆಗಾಗಿ ಮಂಡಿಸಿದೆ.
- ಕಂದಾಯ ಅಧಿಕಾರಿಗಳು(ಯಲಹಂಕ) ರವರ ಅವಗಾಹನೆಗಾಗಿ ಮಂಡಿಸಿದೆ.
- ಕಛೇರಿ ಕಡತಕ್ಕೆ.